ಇರ್ತವಲ್ಲ ಸಾರ್... ಯಾರಾದರೂ ಹಿಡುಕೊಂಡ ತಕ್ಷಣ ಮೈಯಿಂದ ಅಂಟು ಸುರಿಸ್ತವಂತೆ, ಆ ಜಾತಿಗೆ ಸೇರಿದೋರು ಇವ್ರು... ನಿಮ್ಮನ್ನು ಮೈಮುಟ್ಟದ ಹಾಗೆ ಮಾಡೋದಷ್ಟೆ ಅವರ ಉದ್ದೇಶ... ಅವರು ಇದ್ದಷ್ಟೂ ಹೊತ್ತು ಇಡೀ ಸ್ಟೇಷನ್ನು ಗಬ್ಬು ನಾತ ಹೊಡೀತಿರ್ತದೆ. ಈ ನನ್ಮಕ್ಳನ್ನ ಕರ್ಕೊಂಡು ಹೋಗಿ ಕೋರ್ಟಿಗೆ ಹಾಜರುಪಡಿಸಿದ್ರೆ ಸಾಕಪ್ಪಾ ಅನ್ನಿಸಿಬಿಡ್ತದೆ..." ಅನ್ನುತ್ತಿದ್ದ ನನ್ನ ಅಧಿಕಾರಿ ಮಿತ್ರ.

"ಇವ್ರೆಲ್ಲ ಏನೂ ಅಲ್ಲ ಕಣೋ... ವಿಮಾನದಲ್ಲಿ ಬಂದು ಸರಗಳ್ಳತನ, ಡಕೇತಿ ಮಾಡಿಕೊಂಡು ಹೋಗುವ ಶ್ರೀಮಂತ ಕಳ್ಳರ ಗ್ಯಾಂಗೊಂದನ್ನು ಹಿಡಿದಿದ್ದೆವು... ಬೆಳಗ್ಗೆ ಹಾರಿಬಂದು ಸಂಜೆಹೊತ್ತಿಗೆ ನಾಲ್ಕೈದು ಕಡೆ ಕರಾಮತ್ತು ತೋರಿ ಮತ್ತೆ ಪುರ್ರನೆ ಹಾರಿಹೋಗ್ತಾ ಇದ್ರು. ಆದರೆ ಇವರು ಮಾಡ್ತಾ ಇದ್ದದ್ದು ಷೋಕಿಗೆ... ಕೆಲವರು ತಮ್ಮ ಖಾಸಗಿ ಲಾಲಸೆಗಳನ್ನ ಪೂರೈಸಿಕೊಳ್ಳೋದಕ್ಕೆ... ಅದೃಷ್ಟ ಕೈಕೊಟ್ರೆ ಎಷ್ಟು ದೂರದಲ್ಲಿದ್ದರೇನು? ವಿಮಾನದ ಬಾಗಿಲು ಕಳ್ಳರಿಗೂ ತೆರೆಯುತ್ತೆ... ಪೊಲೀಸರಿಗೂ ತೆರೆಯುತ್ತೆ... ಮನೆ ಹುಡುಕುವುದು, ಅಲ್ಲಿಂದಲೇ ಜೂಟಾಟ ಆಡಿಸಿ ಹಿಡಿದುಕೊಂಡು ಬರೋದು ಕಷ್ಟವೇನಲ್ಲ..." ಅನ್ನುತ್ತಿದ್ದ ಇನ್ನೊಬ್ಬ ಗೆಳೆಯ.

ಸಿಕ್ಕಿಬಿದ್ದರೂ ಸುಮ್ಮನಾಗದ ಇಂತಹ ಕ್ರಿಯಾಶೀಲ ಕಳ್ಳರಿಂದಲೇ ಅಪರಾಧ ಜಗತ್ತು ಯಾವಾಗಲೂ ಮಿಸುಗುಡುತ್ತಿರುತ್ತದೆ. ಅದೊಂದು ತರಹ ಚಲನೆಯಿಲ್ಲದೆ ಬಾಯಿ ತೆರೆದುಕೊಂಡು ಮಲಗಿರುವ ಮೊಸಳೆ ಇದ್ದಂತೆ. ಸತ್ತಿದೆ ಅಂದುಕೊಳ್ಳುವುದು ಮೂರ್ಖತನ. ಯಾವಾಗ ಬಾಯ್ತೆರೆದು ಯಾರನ್ನು ನುಂಗುತ್ತದೆಂದು ಊಹಿಸುವುದು ಕಷ್ಟ. ಕೆಲವರು ಜೈಲಿನಲ್ಲಿ ಕುಳಿತೇ ಹೊಸ ಹೊಸ ಉಪಾಯ ಹಾಗೂ ತಂತ್ರಗಳನ್ನು ಹೊಸೆಯುತ್ತಿರುತ್ತಾರೆ. ಹೊರಬಂದ ತಕ್ಷಣ ಅವುಗಳ ಪ್ರಯೋಗಕ್ಕೆ ತೊಡಗುತ್ತಾರೆ. ಇನ್ನೂ ಕೆಲವರಿಗೆ ಜೈಲು ಎಂಬುದೊಂದು ವಿಶ್ವವಿದ್ಯಾಲಯ. ಅರಿವಿಲ್ಲದೆ ತಪ್ಪೆಸಗಿ ಒಳಹೋದ ಸಾಮಾನ್ಯನೂ ಹೊರಬರುವಷ್ಟರಲ್ಲಿ 'ಪಂಟರ್' ಅನ್ನಿಸಿಕೊಂಡಿರುತ್ತಾನೆ. ಹೋಗುವಾಗ ಒಬ್ನೇ ಹೋಗಿರ್ತಾನೆ, ಬರುವಷ್ಟರಲ್ಲಿ ಅವನಿಗೆ ಕೆಲ 'ಬ್ಯಾಡ್ ಎಲಿಮೆಂಟು'ಗಳು ಜೊತೆಯಾಗಿರುತ್ತವೆ. ಇದೇ ಸದ್ಯಕ್ಕೆ ಸ್ವಸ್ಥ ಸಮಾಜ ಎದುರಿಸುತ್ತಿರುವ ಆತಂಕ. ಜವಾಬ್ದಾರಿ ಇರೋರೆಲ್ಲ ಸೇರಿ ಮೊದಲು ಈ ಸರಪಳಿಗಳಿಗೆ ಕತ್ತರಿ ಹಾಕುವತ್ತ ಗಮನ ಹರಿಸಬೇಕು.


### ತುರುವೇಕೆರೆ ರವಿಶಂಕರ್

ತಮ್ಮ ಪೊಲೀಸ್ ವೃತ್ತಿಯ ಅನುಭವಗಳ ಹಿನ್ನೆಲೆಯಲ್ಲಿ ಪ್ರಬಂಧಗಳನ್ನು ಬರೆಯುವ ರವಿಶಂಕರ್ ತುಮಕೂರು ಜಿಲ್ಲೆಯ ತುರುವೇಕೆರೆಯವರು. ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ಬೆಂಗಳೂರು ನಗರ ಗುಪ್ತವಾರ್ತೆ ವಿಭಾಗದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದಾರೆ. 'ಮಯೂರ', 'ಪ್ರಜಾವಾಣಿ', 'ಸುಧಾ'ಗಳಲ್ಲಿ ಅವರ ಪ್ರಬಂಧಗಳು ಪ್ರಕಟವಾಗಿವೆ. ಪ್ರಬಂಧ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಈ ಲೇಖಕ, ಪೊಲೀಸ್ ಅಧಿಕಾರಿಯಾಗಿ ಗುಲ್ಬರ್ಗಾ, ಮಂಗಳೂರುಗಳಲ್ಲಿ ಹಾಗೂ ಎಸ್‌ಟಿಎಫ್‌ನ ವೀರಪ್ಪನ್ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ (2005) ಕಾರ್ಯನಿರ್ವಹಿಸಿದ್ದಾರೆ.